



**ಯಮರಾಜ:** ಎಲೇ, ಕುಡುಕನೇ ನಿನ್ನ ಸಾವು ಹತ್ತಿರವಾಗಿದೆ. ಕೊನೆ ಆಸೆ ಏನಾದರೂ ಇದ್ದರೆ ಹೇಳು?
**ಕುಡುಕ:** ಹೇ ಪ್ರಭು ಮುಂದಿನ ಜನ್ಮದಲ್ಲಿ ನನಗೆ ಹಲ್ಲನ್ನು ಒಂದೇ ಕೊಡಿ, ಆದರೆ ಲಿವರ್ ಮಾತ್ರ 32 ನೀಡಿ.

**ಮಗ:** ಅಪ್ಪ, ನಾಳೆ ನಾನು ನಾಟಕದಲ್ಲಿ ಗಂಡನ ಪಾರ್ಟ್ ಮಾಡ್ತಾ ಇದ್ದೀನಿ.
**ಅಪ್ಪ:** ಯಾಕೋ ಬೇರೆ ಪಾತ್ರ ಸಿಗಲಿಲ್ವಾ?
**ಮಗ:** ಅಪ್ಪಾ, ಇದೇ ತುಂಬ ಸುಲಭದ್ದು ನಂಗೆ, ಯಾವುದೇ ಡೈಲಾಗ್ಸ್ ಹೇಳೋ ಅಗತ್ಯಾನೇ ಇಲ್ಲ ಇದ್ರಲ್ಲಿ.

**ಜ್ಯೋತಿಷಿ:** ನಿನ್ನ ಎಡ ತೊಡೆಯ ಮೇಲೆ ಮಚ್ಚೆ ಇದೆ. ನೀನು ಮಹಾಶೂರ, ಮಹಾವೀರನಾಗ್ತೀಯ.
**ಗುಂಡ:** ಸ್ವಾಮಿ ಇದು ಮಚ್ಚೆ ಅಲ್ಲ ನನ್ನ ಹೆಂಡತಿ ಹಾಕಿದ ಬರೆ.

ಕಳ್ಳತನ ಮಾಡುವುದೇ ವೃತ್ತಿ ಮಾಡಿಕೊಂಡಿದ್ದ ಕಳ್ಳನಿಗೆ ಅವನ ಹೆಂಡತಿ ಹೀಗೆ ಕೇಳಿದಳು.
**ಕಳ್ಳನ ಹೆಂಡತಿ:** ಬೀರುವಿನಲ್ಲಿ ಇಟ್ಟಿದ್ದ ನನ್ನ ಚಿನ್ನದ ಬಳೆಗಳು, ಚಿನ್ನದ ಸರ, ಕಾಣ್ತಾ ಇಲ್ಲ. ನೀವೇನಾದ್ರೂ 'ವರ್ಕ್ ಫ್ರಂ ಹೋಂ' ಮಾಡಿದ್ರಾ?
**ಕಳ್ಳ:** ಕಷ್ಟ ಅಂತ ಬಂದಾಗ ಎಲ್ಲಿಂದಾದ್ರೂ ಕೆಲಸ ಮಾಡಲೇಬೇಕಲ್ವಾ, ಅದ್ಕೆ ಮನೆಯಿಂದಲೇ ಕೆಲಸ ಮಾಡ್ದೆ.

**ಗಂಡ:** ಏನೇ, ಸಾಂಬಾರಲ್ಲಿ ಎರಡು ರೂಪಾಯಿ ಕಾಯಿನ್ಸ್ ಹಾಕಿದ್ದೀಯಲ್ಲ?
**ಹೆಂಡತಿ:** ನೀವೇ ಹೇಳಿದಿರಲ್ಲಾ ಅಡುಗೆಯಲ್ಲಿ ಚೇಂಜ್ ಇರಲಿ ಅಂತ. ಅದ್ಕೆ ಹಾಕ್ದೆ.

**ತಿಮ್ಮ:** ಬೊಗಳೋ ನಾಯಿ ಕಚ್ಚೋದಿಲ್ಲ ಯಾಕೆ?
**ಗುಂಡ:** ಏಕೆಂದರೆ ಒಂದೇ ಸಮಯದಲ್ಲಿ ಎರಡು ಕೆಲಸ ಮಾಡುವುದಕ್ಕೆ ಆಗೋದಿಲ್ಲ ಅದಕ್ಕೆ.

ಗುಂಡ ಹೋಂವರ್ಕ್ ಮಾಡದೆ ಶಾಲೆಗೆ ಹೋಗಿದ್ದರಿಂದ ಗಣಿತದ ಮೇಷ್ಟ್ರು ಸಿಕ್ಕಾಪಟ್ಟೆ ಹೊಡೆದರು. ಕೋಪದಿಂದ ಗುಂಡ ಸೀದಾ ಮೇಷ್ಟ್ರು ಮನೆಗೆ ಹೋಗಿ ಬಾಗಿಲು ತಟ್ಟಿದ. ಮೇಷ್ಟ್ರು ಹೆಂಡತಿ ಬಾಗಿಲು ತೆಗೆದರು.
**ಗುಂಡ:** ಇದು ಮೇಷ್ಟ್ರು ಮನೆನಾ? ನೀವ್ಯಾರು?
**ಮೇಷ್ಟ್ರು ಹೆಂಡತಿ:** ಹೌದು ಮೇಷ್ಟ್ರ ಮನೆನೆ. ನಾನು ಅವರ ಹೆಂಡತಿ.
**ಗುಂಡ:** ಹೌದಾ, ಮತ್ತೆ ಆಗಾಗ ಮೇಷ್ಟನ್ನ ಹುಡುಕಿಕೊಂಡು ಶಾಲೆಗೆ ಬರುವ ಆ ಹೆಂಗಸು ಯಾರು?
ಗುಂಡ ಸೇಡು ತೀರಿಸಿಕೊಂಡ.

**ಭಿಕ್ಷುಕ:** ಏನಾದರೂ ತಿನ್ನಕ್ಕೆ ಕೊಡಿ ಸರ್, ನಿಮಗೇ ಸ್ವರ್ಗ ಸಿಗುತ್ತೆ.
**ಗುಂಡ:** ಬೆಂಗಳೂರ್ ಕೊಡ್ತೀನಿ ತಗೋ.
**ಭಿಕ್ಷುಕ:** ತಿನ್ನಕ್ಕೆ ಏನಾದರೂ ಕೊಡಿ ಅಂದರೆ ಬೆಂಗಳೂರ್ ಕೊಡತಾರಂತೆ, ಬೆಂಗಳೂರ ಏನ್ ನಿಮ್ದಾ?
**ಗುಂಡ:** ಸ್ವರ್ಗ ಸಿಗುತ್ತೆ ಅಂತಿದ್ದಿಯಲ್ಲ ಸ್ವರ್ಗ ನಿಂದಾ?


**ಗುಂಡ:** ನಾನು ಮದುವೆಗೆ ಮುಂಚೆ ಪಾತ್ರೆ ತೊಳೀತಾ ಇದ್ದೆ.
**ತಿಮ್ಮ:** ಮತ್ತೆ ಈಗ?
**ಗುಂಡ:** ಮದುವೆ ಆದ್ಮೇಲೆ ನನ್ನ ಹೆಂಡತಿ ಹತ್ರ ಚೆನ್ನಾಗಿ ಇಂಗ್ಲಿಷ್ ಕಲಿತೆ.
**ತಿಮ್ಮ:** ಆಮೇಲೆ?
**ಗುಂಡ:** ಇವಾಗ ಪಾತ್ರೆ ವಾಷ್ ಮಾಡ್ತಿದ್ದೀನಿ.

**ಟೀಚರ್:** ಭೂಮಿ ಮತ್ತು ಚಂದ್ರನ ನಡುವೆ ಎಷ್ಟು ದೂರ ಇದೆ?
**ಗುಂಡ:** ಬರೀ ಎರಡು ಕಿಲೋಮೀಟರ್. ಭೂಮಿ ರಾಜಾಜಿನಗರದಲ್ಲಿದ್ದರೆ, ಚಂದ್ರ ಮಲ್ಲೇಶ್ವರಂನಲ್ಲಿರ್ತಾನೆ ಮೇಡಂ.

ಕೋಮಾದಿಂದ ಎದ್ದ ನಂತರ...
**ರೋಗಿ:** ಡಾಕ್ಟೆ ನನಗೇನಾಗಿತ್ತು?
**ಡಾಕ್ಟರ್:** ಏನಿಲ್ಲ ಸ್ವಲ್ಪ ಹೊತ್ತು ನಿಮ್ಮ ಇಂಟರ್ನೆಟ್ ಬಂದ್ ಆಗಿತ್ತು, ಆ ಶಾಕ್‌ಗೆ ಕೋಮಾಗೆ ಹೋಗಿದ್ರಿ.

**ಮಗ:** ಅಪ್ಪ ನಿಮಗೆ ಒಂದು ಕೋಟಿ ಲಾಟರಿ ಹೊಡೆಯುತ್ತೆ, ಅವತ್ತೇ ಮಮ್ಮಿ ಕಿಡ್ನಾಪ್ ಆಗಿಬಿಟ್ರೆ ಏನ್ ಮಾಡ್ತಿರಿ?
**ಅಪ್ಪ:** ಸಾಧ್ಯಾನೇ ಇಲ್ಲ, ಒಂದೇ ದಿನಕ್ಕೆ ಎರಡೆರಡು ಲಾಟರಿ ಹೊಡೆಯಲ್ಲ.

**ತಿಮ್ಮ:** ಭಾರತದ ಅತಿ ದೊಡ್ಡ ಸುಳ್ಳು ಯಾವುದು?
**ಗುಂಡ:** ಕಾನೂನು ಎಲ್ಲರಿಗೂ ಒಂದೇ ಅಂತ ಹೇಳುವುದು.



“ಕಸ” ನೀ ನಮ್ಮ ”ಬೊಕ್ಕಸ”...!!

**ಹೆಂಡತಿ:** ಡಾಕ್ಟರ್ ಹತ್ರ ಹೋಗಿದ್ರಾ, ಏನಂದ್ರು?
**ಗಂಡ:** ಏನಿಲ್ಲ, ಔಷಧಿ ಕೊಟ್ಟಿದ್ದಾರೆ.
**ಹೆಂಡತಿ:** ಸಮಸ್ಯೆಗಳನ್ನೆಲ್ಲ ಹೇಳಿದ್ರಿ ತಾನೆ?
**ಗಂಡ:** ಇಲ್ಲ, ನಿನ್ನ ಬಗ್ಗೆ ಏನೂ ಹೇಳ್ಲಿಲ್ಲ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**